- **ಸೌಲಭ್ಯ** : ವಿಚಾರ ಸಂಕಿರಣದಲ್ಲಿ ಭಾಗವಹಿಸುವ ಎಲ್ಲ ಪ್ರತಿನಿಧಿಗಳಿಗೂ ಎರಡು ದಿನಗಳ ಊಟ, ವಸತಿ, ಪ್ರಮಾಣ ಪತ್ರ ಮತ್ತು ಕಿಟ್ ಒದಗಿಸಲಾಗುವುದು ಹಾಗೂ ಪ್ರಾಧ್ಯಾಪಕರಿಗೆ ಓ.ಓ.ಡಿ ಸೌಲಭ್ಯವಿದೆ.
- **ನೋಂದಣಿಗೆ ಕೊನೆಯ ದಿನ** : ದಿನಾಂಕ ೧೫-೧೧-೨೦೨೩ರೊಳಗೆ ಆನ್‌ಲೈನ್ ಮೂಲಕ ನೋಂದಾಯಿಸುವುದು.
- ಭಾಷಾಂತರ ಕೃತಿಗಳ ಪ್ರದರ್ಶನ ಮತ್ತು ಪುಸ್ತಕ ಮಾರಾಟ ವ್ಯವಸ್ಥೆಯಿದೆ.
- ಸಮಾವೇಶದ ಸ್ಥಳೀಯ ಸಂಚಾಲಕರು

  ಡಾ. ದಿವ ಕೊಕ್ಕಡ - ೯೯೦೨೦ ೩೨೪೮೦, ಡಾ. ನಾಗಣ್ಣ ಡಿ.ಎ. - ೯೯೮೦೨ ೪೦೨೧೦

  ಹೆಚ್ಚಿನ ಮಾಹಿತಿಗಾಗಿ

  ವಸತಿ ಸಮಿತಿ ಸಂಚಾಲಕರು : ಡಾ. ಎಂ.ಪಿ. ಶ್ರೀನಾಥ್ - ೯೪೪೮೫ ೫೮೫೮೩

  ನೋಂದಣಿ ಸಮಿತಿ ಸಂಚಾಲಕರು : ಶ್ರೀ ಮಹೇಶ್ ಆರ್., - ೯೮೪೪೭ ೧೮೩೨೩

  ಪುಸ್ತಕ ಪ್ರದರ್ಶನ ಸಂಚಾಲಕರು : ಡಾ. ಸನ್ಮತಿ ಕುಮಾರ್ - ೭೩೩೭೬ ೨೬೬೦೫

**ಭಾಷಾಂತರ ಅಧ್ಯಯನ ವಿಭಾಗ** : ಕನ್ನಡ ವಿಶ್ವವಿದ್ಯಾಲಯದ ಭಾಷಾಂತರ ಅಧ್ಯಯನ ವಿಭಾಗವು ಭಾಷಾಂತರ ಕ್ಷೇತ್ರದಲ್ಲಿ ಅಧ್ಯಯನ ಯೋಜನೆಗಳು, ಬೋಧನೆ, ಭಾಷಾಂತರ ತರಬೇತಿ, ವಿಚಾರ ಸಂಕಿರಣ, ವಿಶೇಷ ಉಪನ್ಯಾಸ ಇತ್ಯಾದಿಗಳ ಮೂಲಕ ಕ್ರಿಯಾಶೀಲವಾಗಿ ೧೯೯೨ರಿಂದಲೂ ಕೆಲಸ ನಿರ್ವಹಿಸುತ್ತಾ ಬಂದಿದೆ. ಭಾಷಾಂತರ ಅಧ್ಯಯನವನ್ನು ಕನ್ನಡದಲ್ಲಿ ಒಂದು ಶೈಕ್ಷಣಿಕ ಶಿಸ್ತಾಗಿ ರೂಪಿಸುವಲ್ಲಿ ವಿಭಾಗದ ಚಟುವಟಿಕೆಗಳು ಗಮನಾರ್ಹವಾಗಿವೆ. ಈ ದಿಸೆಯಲ್ಲಿ ಅನೇಕ ಭಾಷಾಂತರ ಅಧ್ಯಯನ ಕೃತಿಗಳನ್ನು ಪ್ರಕಟಿಸಿದೆ. ಹಾಗೆಯೇ ಸಂಶೋಧನಾ ಪ್ರಬಂಧಗಳನ್ನು ರೂಪಿಸಿದೆ.

**ಭಾಷಾಂತರ ಕೇಂದ್ರ** : ಕನ್ನಡ ವಿಶ್ವವಿದ್ಯಾಲಯದ ಭಾಷಾಂತರ ಕೇಂದ್ರವು ಬಾಹ್ಯ ವಿದ್ವಾಂಸರ ನೆರವಿನಿಂದ ಭಾಷಾಂತರ ಯೋಜನೆಗಳನ್ನು ರೂಪಿಸಿ ಪ್ರಕಟಿಸುವ ಕೆಲಸಗಳನ್ನು ೨೦೦೫ರಿಂದಲೂ ನಿರ್ವಹಿಸುತ್ತಾ ಬಂದಿದೆ. ಈಗಾಗಲೇ ಅನೇಕ ಕೃತಿಗಳನ್ನು ಇಂಗ್ಲಿಷ್ ಹಾಗೂ ಕನ್ನಡ ಭಾಷೆಗಳಿಗೆ ಭಾಷಾಂತರಿಸಿ ಪ್ರಕಟಿಸಿದೆ.

**ಶ್ರೀ ಕೆ. ಎಸ್. ವೀರಭದ್ರಪ್ಪ ದತ್ತಿ ನಿಧಿ** : ಸಂಡೂರಿನ ಉದ್ಯಮಿಗಳು, ಸಂಸ್ಕೃತಿಪ್ರಿಯರು ಹಾಗು ಮಾಜಿ ಸಂಸದರೂ ಆದ ಶ್ರೀ ಕೆ.ಎಸ್. ವೀರಭದ್ರಪ್ಪನವರು ಕನ್ನಡ ನಾಡು, ನುಡಿ, ಸಂಸ್ಕೃತಿ ಸಂವರ್ಧನೆಗಾಗಿ ಶ್ರಮಿಸುತ್ತಿರುವ ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ೨೦೦೭ರಲ್ಲಿ ನೀಡಿದ ದತ್ತಿ ನಿಧಿ.

**ಕರ್ನಾಟಕ ಭಾಷಾಂತರಕಾರರ ಒಕ್ಕೂಟ** : ಸಾರ್ವಜನಿಕವಾಗಿ ಭಾಷಾಂತರಕಾರರನ್ನು ಹಾಗೂ ಭಾಷಾಂತರ ಕ್ಷೇತ್ರದ ಅಧ್ಯಯನಾಸಕ್ತರನ್ನು ಒಟ್ಟುಗೂಡಿಸಿ ಭಾಷಾಂತರ ಚಟುವಟಿಕೆಗಳನ್ನು ಆಯೋಜಿಸುವ ಸಲುವಾಗಿ ಕನ್ನಡ ವಿಶ್ವವಿದ್ಯಾಲಯದ ಭಾಷಾಂತರ ಅಧ್ಯಯನ ವಿಭಾಗದ ಸದಸ್ಯರು ೨೦೦೭ರಲ್ಲಿ ಹುಟ್ಟುಹಾಕಿದ ಸಂಘಟನೆ. ಪ್ರಸ್ತುತ ಭಾಷಾಂತರಕಾರರ ತೃತೀಯ ಸಮಾವೇಶದ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಈ ದಿಸೆಯಲ್ಲಿ ಇನ್ನಷ್ಟು ಚಟುವಟಿಕೆಗಳನ್ನು ನಡೆಸಬೇಕಾದ ದಾರಿಗಳನ್ನು ಕಂಡುಕೊಳ್ಳುವ ಉದ್ದೇಶವಿದೆ.

**ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು (ಸ್ವಾಯತ್ತ), ಉಜಿರೆ** : ಗ್ರಾಮೀಣ ಪ್ರದೇಶದ ಮಕ್ಕಳಿಗೆ ಉನ್ನತ ಶಿಕ್ಷಣ ದೊರೆಯಬೇಕು ಎಂಬ ಉದ್ದೇಶದಿಂದ ಶ್ರೀ ಕ್ಷೇತ್ರ ಧರ್ಮಸ್ಥಳದ ಅಂದಿನ ಧರ್ಮಾಧಿಕಾರಿ ದಿ. ರತ್ನವರ್ಮ ಹೆಗ್ಗಡೆಯವರು ೧೯೬೬ರಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜನ್ನು ಶ್ರೀ ಸಿದ್ಧವನ ಗುರುಕುಲದಲ್ಲಿ ಆರಂಭಿಸಿದರು. ಮೊದಲು ಮೈಸೂರು ವಿಶ್ವವಿದ್ಯಾನಿಲಯದ ಮಾನ್ಯತೆಯನ್ನು ಪಡೆದಿದ್ದ ಈ ಕಾಲೇಜು ಇದೀಗ ಮಂಗಳೂರು ವಿಶ್ವವಿದ್ಯಾನಿಲಯದ ಮಾನ್ಯತೆಗೆ ಒಳಗಾಗಿದ್ದು ಸ್ವಾಯತ್ತ ಸಂಸ್ಥೆಯಾಗಿ ಬೆಳೆದಿದೆ. ಆರ್ಟ್ಸ್, ಸೈನ್ಸ್ ಮತ್ತು ಕಾಮರ್ಸ್ ವಿಷಯಗಳಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ವ್ಯಾಸಂಗಕ್ಕೆ ಅವಕಾಶವಿದ್ದು, ಪ್ರಸ್ತುತ ಧರ್ಮಾಧಿಕಾರಿ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ಅಧ್ಯಕ್ಷರಾಗಿರುವ ಈ ಕಾಲೇಜು ಗುಣಮಟ್ಟದ ಶಿಕ್ಷಣಕ್ಕಾಗಿ ಇಂದು ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿದೆ. ಯುಜಿಸಿ ಪ್ರಾಯೋಜಿತ 'ನ್ಯಾಕ್' ರಾಷ್ಟ್ರೀಯ ಮೌಲ್ಯಾಂಕನ ಸಂಸ್ಥೆಯಿಂದ ೪ನೇ ಹಂತದಲ್ಲಿ A++ ಮಾನ್ಯತೆಯನ್ನು ಪಡೆದ ಹೆಗ್ಗಳಿಕೆ ಈ ಮಹಾವಿದ್ಯಾಲಯದ್ದಾಗಿದೆ.

**ಡಾ. ಹಾ.ಮಾ.ನಾ. ಸಂಶೋಧನಾ ಕೇಂದ್ರ** : ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ವಾಯತ್ತ ಮಹಾವಿದ್ಯಾಲಯದಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆಯೊಂದಿಗೆ ೨೦೦೬ರಲ್ಲಿ ಆರಂಭಿಸಲಾಗಿದೆ. ಕನ್ನಡ ಸಾಹಿತ್ಯ ಅಧ್ಯಯನ, ಚರಿತ್ರೆ ಮತ್ತು ಅಭಿವೃದ್ಧಿ ಅಧ್ಯಯನ ವಿಷಯಗಳಲ್ಲಿ ಪಿಎಚ್.ಡಿ. ಅಧ್ಯಯನಗಳಿಗೆ ಅವಕಾಶ ಕಲ್ಪಿಸಲಾಗುತ್ತಿದೆ. 'ಶೋಧ' ಹೆಸರಿನ (ಕನ್ನಡ ಮತ್ತು ಇಂಗ್ಲಿಷ್) ದ್ವಿಭಾಷಿಕ ಬಹುಶಿಸ್ತೀಯ ಅರ್ಧವಾರ್ಷಿಕ ಸಂಶೋಧನಾ ನಿಯತಕಾಲಿಕವನ್ನು ಈ ಕೇಂದ್ರವು ಪ್ರಕಟಿಸುತ್ತಿದೆ.

**ಭಾಷಾಂತರ ಅಧ್ಯಯನ ವಿಭಾಗ** ಮತ್ತು **ಭಾಷಾಂತರ ಕೇಂದ್ರ**
ಹಾಗೂ ಶ್ರೀ ಕೆ.ಎಸ್. ವೀರಭದ್ರಪ್ಪ ದತ್ತಿನಿಧಿ
**ಕನ್ನಡ ವಿಶ್ವವಿದ್ಯಾಲಯ, ಹಂಪಿ**
ವಿದ್ಯಾರಣ್ಯ - ೫೮೩ ೨೭೬

ಹಾಗೂ

**ಡಾ. ಹಾ.ಮಾ.ನಾ. ಸಂಶೋಧನಾ ಕೇಂದ್ರ** ಮತ್ತು **ಕನ್ನಡ ವಿಭಾಗ**
**ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಾವಿದ್ಯಾಲಯ (ಸ್ವಾಯತ್ತ)**
ಉಜಿರೆ, ದ. ಕ. ೫೭೪ ೨೪೦
ಇವರ ಜಂಟಿ ಆಶ್ರಯದಲ್ಲಿ

**ಕರ್ನಾಟಕ ಭಾಷಾಂತರಕಾರರ ಒಕ್ಕೂಟ**
ಸಹಯೋಗದೊಡನೆ

**ಭಾಷಾಂತರಕಾರರ ಮೂರನೆಯ ಸಮಾವೇಶ**
ಅಂಗವಾಗಿ

## ಕನ್ನಡ ಸಾಂಸ್ಕೃತಿಕ ಸಂವರ್ಧನೆ ಮತ್ತು ಭಾಷಾಂತರಕಾರರು
**ರಾಷ್ಟ್ರೀಯ ವಿಚಾರ ಸಂಕಿರಣ**

೨೨-೧೧-೨೦೨೩ ಬುಧವಾರ ಮತ್ತು ೨೩-೧೧-೨೦೨೩ ಗುರುವಾರ
ಸ್ಥಳ: ಶ್ರೀ ಸಿದ್ಧವನ ಗುರುಕುಲ, ಉಜಿರೆ

## ಎಲ್ಲರಿಗೂ ಸ್ವಾಗತ

**ಡಾ. ಬಿ.ಎ. ಕುಮಾರ ಹೆಗ್ಡೆ,** ಪ್ರಾಂಶುಪಾಲರು
ಎಸ್.ಡಿ.ಎಂ. ಮಹಾವಿದ್ಯಾಲಯ

**ಡಾ. ಬೋಜಮ್ಮ ಕೆ.ಎನ್.**
ಮುಖ್ಯಸ್ಥರು, ಕನ್ನಡ ವಿಭಾಗ

**ಡಾ. ದಿವ ಕೊಕ್ಕಡ,** ಸಂಯೋಜನಾಧಿಕಾರಿಗಳು
ಡಾ. ಹಾ.ಮಾ.ನಾ. ಸಂಶೋಧನಾ ಕೇಂದ್ರ
ಮತ್ತು ಸಮಾವೇಶದ ಸ್ಥಳೀಯ ಸಂಚಾಲಕರು

**ಡಾ. ವಿಜಯ್ ಪೂಣಚ್ಚ ತಂಬಂಡ**
ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಡಾ. ಎ. ಮೋಹನ ಕುಂಟಾರ್**
ಮುಖ್ಯಸ್ಥರು, ಭಾಷಾಂತರ ಅಧ್ಯಯನ ವಿಭಾಗ
ಕಾರ್ಯಕ್ರಮದ ಸಂಯೋಜಕರು

**ಡಾ. ಎಂ. ಮಲ್ಲಿಕಾರ್ಜುನ ಗೌಡ**
ಸಂಚಾಲಕರು, ಶ್ರೀ ಕೆ.ಎಸ್. ವೀರಭದ್ರಪ್ಪ ದತ್ತಿನಿಧಿ

ಉದಯವಾಣಿ

## ಉಜಿರೆಯಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣ

# ಭಾಷಾಂತರಕಾರರಿಗೆ ರಾ. ಮನ್ನಣೆ ಅಗತ್ಯ: ಡಾ| ಹೆಗ್ಗಡೆ

ಬೆಳ್ತಂಗಡಿ, ನ. 22: ಹೊಸ ಕೃತಿ ರಚನೆ ಮಾಡುವುದಕ್ಕೂ ಒಂದು ಕೃತಿಯನ್ನು ಇನ್ನೊಂದು ಭಾಷೆಗೆ ತರುವುದಕ್ಕೂ ವ್ಯತ್ಯಾಸವಿದೆ. ಆ ಕಾರ್ಯದಲ್ಲಿ ಆಳವಾದ ಅಧ್ಯಯನ, ಹುಡುಕಾಟ ಅಗತ್ಯವಾಗುತ್ತದೆ. ಹಾಗಾಗಿ ಭಾಷಾಂತರಕಾರರಿಗೆ ರಾಷ್ಟ್ರೀಯ ಮನ್ನಣೆ ಸಿಗುವುದು ಅಗತ್ಯ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ, ಎಸ್‌ಡಿಎಂ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾದ ಡಾ| ಡಿ. ವೀರೇಂದ್ರ ಹೆಗ್ಗಡೆ ಅಭಿಪ್ರಾಯಪಟ್ಟರು.

ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಭಾಷಾಂತರ ಅಧ್ಯಯನ ವಿಭಾಗ ಮತ್ತು ಭಾಷಾಂತರ ಕೇಂದ್ರ ಹಾಗೂ ಶ್ರೀ ಕೆ.ಎಸ್. ವೀರಭದ್ರಪ್ಪ ದತ್ತಿನಿಧಿ ಮತ್ತು ಉಜಿರೆ ಎಸ್‌ಡಿಎಂ ಸ್ವಾಯತ್ತ ಕಾಲೇಜಿನ ಡಾ| ಹಾ.ಮಾ.ನಾ. ಸಂಶೋಧನ ಕೇಂದ್ರ ಮತ್ತು ಕನ್ನಡ ವಿಭಾಗದ ಜಂಟಿ ಆಶ್ರಯದಲ್ಲಿ ಕರ್ನಾಟಕ



ಭಾಷಾಂತರಕಾರರ ಒಕ್ಕೂಟದ ಸಹಯೋಗದಲ್ಲಿ ಭಾಷಾಂತರಕಾರರ ಮೂರನೆಯ ಸಮಾವೇಶದ ಅಂಗವಾಗಿ ಉಜಿರೆಯ ಶ್ರೀ ಸಿದ್ಧವನ ಗುರುಕುಲದಲ್ಲಿ ಆಯೋಜಿಸಲಾದ ಕನ್ನಡ ಸಾಂಸ್ಕೃತಿಕ ಸಂವರ್ಧನೆ ಮತ್ತು ಭಾಷಾಂತರಕಾರರು ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು.

ವಿಶೇಷ ಸಹನೆ, ಅನುಭವ, ಜೀವನಾನುಭವ ಬೇಡುವ ಭಾಷಾಂತರ ಕಾರ್ಯ ಸುಲಭವಲ್ಲ. ಅಂತಹ ಮಹತ್ವದ ಕಾರ್ಯಕ್ಕೆ ಮನ್ನಣೆ ಅಗತ್ಯ. ವಿಶ್ವವಿದ್ಯಾನಿಲಯಗಳಿಂದ ಅವರಿಗೆ ಗೌರವ ಸಿಗುವುದು ಉತ್ತಮ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿದ್ದ ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ| ಎಂ. ಮೋಹನ ಆಳ್ವ ಮಾತನಾಡಿ, ಬಹುಸಂಸ್ಕೃತಿ ಮತ್ತು ಬಹುಭಾಷೆ ಭಾರತದ ಸತ್ವ ಮತ್ತು ಸಂಪತ್ತು. ಅದನ್ನು ಕಾಪಾಡುವಲ್ಲಿ ಭಾಷಾಂತರಕಾರರು ಮುಖ್ಯ ಪಾತ್ರ ವಹಿಸುತ್ತಾರೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಎಸ್‌ಡಿಎಂ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಡಾ| ಸತೀಶ್ಚಂದ್ರ ಎಸ್. ಮಾತನಾಡಿ, ಭಾಷೆ, ಭಾಷಾಂತರ ಜನಜೀವನದ ಅವಿಭಾಜ್ಯ ಅಂಗ. ಭಾಷಾಂತರದ ಮೂಲಕ ಭಾಷೆ ಹಾಗೂ ಸಂಸ್ಕೃತಿಗಳು ಸಮೃದ್ಧಿ ಕಂಡಿವೆ ಎಂದು ತಿಳಿಸಿದರು.

ಕಾರ್ಯಕ್ರಮ ಸಂಯೋಜಕ, ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಭಾಷಾಂತರ ಅಧ್ಯಯನ ವಿಭಾಗ ಮತ್ತು ಭಾಷಾಂತರ ಕೇಂದ್ರದ ಮುಖ್ಯಸ್ಥ ಡಾ| ಎ. ಮೋಹನ ಕುಂಟಾರು ಪ್ರಸ್ತಾವನೆಗೈದರು.

ಎಸ್‌ಡಿಎಂ ಕಾಲೇಜಿನ ಪ್ರಾಂಶುಪಾಲ ಡಾ| ಬಿ.ಎ. ಕುಮಾರ ಹೆಗ್ಡೆ ಸ್ವಾಗತಿಸಿ, ಕನ್ನಡ ವಿಭಾಗ ಮುಖ್ಯಸ್ಥೆ ಡಾ| ಬೋಜಮ್ಮ ಕೆ.ಎನ್. ಅವರು ವಂದಿಸಿದರು.

Sri Dharmasthala Manjunatheshwara College
(Autonomous), Ujire-574 240, Dakshina Kannada, Karnataka State

VK
ವಿಜಯ ಕರ್ನಾಟಕ
e-paper

# ಭಾಷಾಂತರಕಾರರಿಗೆ ವಿವಿಗಳಿಂದ ವಿಶೇಷ ಸ್ಥಾನಮಾನ ಸಿಗಲಿ

## ಭಾಷಾಂತರಕಾರರ ಮೂರನೇ ಸಮಾವೇಶದ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಡಾ.ಹೆಗ್ಗಡೆ

■ **ವಿಕ ಸುದ್ದಿಲೋಕ** ಉಜಿರೆ

''ಭಾಷಾಂತರದಿಂದ ಸಾಂಸ್ಕೃತಿಕ ಪರಿವರ್ತನೆಯ ಪರಿಣಾಮ ಉಂಟಾಗುವುದರ ಜತೆ ವಿಚಾರಗಳು, ಮೌಲ್ಯಗಳು, ಹಿನ್ನೆಲೆ ಹೆಚ್ಚುತ್ತದೆ. ಯಾವುದೇ ಭಾಷೆಯ ಕುರಿತು ತಾತ್ಸಾರ ಮಾಡದೆ ಗೌರವದಿಂದ ಸ್ವೀಕರಿಸಬೇಕು. ನಮ್ಮ ಆಚಾರ, ವಿಚಾರ, ನಡವಳಿಕೆ, ಭಾಷೆಗಳ ಮೂಲಕ ಇತರರಿಗೆ ಗೌರವ ಮೂಡುವಂತೆ ಮಾಡಬೇಕು. ಭಾಷಾಂತರದಲ್ಲಿ ತೊಡಗಿರುವವರಿಗೆ ವಿಶ್ವವಿದ್ಯಾಲಯಗಳು ವಿಶೇಷ ಸ್ಥಾನಮಾನ ನೀಡಬೇಕಾದ ಅಗತ್ಯವಿದೆ,'' ಎಂದು ಧರ್ಮಸ್ಥಳ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಹೇಳಿದರು.

ಉಜಿರೆ ಸಿದ್ಧವನದಲ್ಲಿ 2 ದಿನಗಳ ಕಾಲ ಜರುಗುವ ಭಾಷಾಂತರಕಾರರ ಮೂರನೇ ಸಮಾವೇಶದ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

''ಭಾಷಾಂತರ ಕಷ್ಟದ ಕೆಲಸ. ವಿಶೇಷ ಜ್ಞಾನದ ಜತೆ ಪದಗಳ, ಭಾವನೆಗಳ ವಿಚಾರದ ತಿಳಿವಳಿಕೆಯೊಂದಿಗೆ ಭಾಷಾಂತರ ಕೆಲಸ ಸಾಗಬೇಕು. ತುಳು ಸಂದಿ, ಪಾಡ್ದನಗಳನ್ನು ಆಂಗ್ಲ ಭಾಷೆಗೆ ಭಾಷಾಂತರಿಸುವ ಮೂಲಕ ಅಂತಾರಾಷ್ಟ್ರೀಯ ಮನ್ನಣೆ ಗಳಿಸಿರುವುದು ಶ್ಲಾಘನೀಯ. ಸಿನಿಮಾಗಳು ಆಯಾ ರಾಜ್ಯದ ಸಂಸ್ಕೃತಿ, ಜೀವನ ಶೈಲಿ, ಸಾಮಾಜಿಕ ಮೌಲ್ಯಗಳನ್ನು ಪರಿಚಯಿಸುತ್ತವೆ,'' ಎಂದರು.



ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ವಿಚಾರ ಸಂಕಿರಣ ಉದ್ಘಾಟಿಸಿದರು.

ಮೂಡುಬಿದಿರೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ ಮಾತನಾಡಿ, ''ಭಾಷಾಂತರ ಕಲೆ ವಿಜ್ಞಾನ ಮತ್ತು ವಾಣಿಜ್ಯ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಎಲ್ಲ ಭಾಷೆಗಳ ಬೆಳವಣಿಗೆಯಲ್ಲಿ ಇತರ ಭಾಷೆಗಳ ಕೊಡುಗೆಯೂ ಇದೆ. ಭಾಷಾಂತರಕಾರರಿಗೆ ಸವಾಲುಗಳನ್ನು ಎದುರಿಸಲು ಧೈರ್ಯ ಇರಬೇಕು. ಭಾಷಾಂತರ ತತ್ವದ ಅರಿವು ಎಲ್ಲರಲ್ಲೂ ಮೂಡಬೇಕು. ಇದು ನಿರಂತರ ಪ್ರಕ್ರಿಯೆಯಾಗಿ ಮುಂದುವರಿಯಬೇಕು,'' ಎಂದರು.

ಹಂಪಿ ವಿವಿ ಭಾಷಾಂತರ ವಿಭಾಗದ ಮುಖ್ಯಸ್ಥ ಡಾ. ಎ. ಮೋಹನ ಕುಂಟಾರು ಪ್ರಾಸ್ತಾವಿಕ ಮಾತನಾಡಿ, ''ಸಾಹಿತ್ಯ ಲೋಕ ಅನನ್ಯವಾಗಿ ಬೆಳೆದು ಬಂದಿದ್ದಲ್ಲದೆ, ಇಲ್ಲಿ ಭಾಷಾಂತರ ಕೆಲಸ ಮಾಡುವ ಅನೇಕರನ್ನು ಗುರುತಿಸುವುದು ನಮ್ಮ ಕರ್ತವ್ಯ. ಎಲೆಮರೆಯ ಕಾಯಿಯಾಗಿ ಉಳಿದಿರುವ ಅನೇಕ ಭಾಷಾಂತರಕಾರರು ಮುನ್ನೆಲೆಗೆ ಬರಬೇಕು. ಭಾಷಾಂತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರಿಗೆ ನಿವೃತ್ತಿ ಎಂಬುವುದಿಲ್ಲ, ಭಾಷಾಂತರ ಕಾರ್ಯದಿಂದ ಹೊಸ ಬಗೆಯ ಜ್ಞಾನ ಮೂಡುತ್ತದೆ,'' ಎಂದರು.

ಎಸ್‌ಡಿಎಂ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಡಾ. ಸತೀಶ್ಚಂದ್ರ ಎಸ್. ಅಧ್ಯಕ್ಷತೆ ವಹಿಸಿದ್ದರು.

ಉಜಿರೆ ಎಸ್‌ಡಿಎಂ ಸ್ವಾಯತ್ತ ಕಾಲೇಜಿನ ಪ್ರಿನ್ಸಿಪಾಲ್ ಡಾ. ಕುಮಾರ್ ಹೆಗ್ಡೆ ಬಿ.ಎ. ಸ್ವಾಗತಿಸಿದರು. ಡಾ. ಹಾಮಾನಾ ಸಂಶೋಧನ ಕೇಂದ್ರದ ಸಂಯೋಜನಾಧಿಕಾರಿ ಡಾ. ದಿವಾಕರ್ ಕೊಕ್ಕಡ ಕಾರ್ಯಕ್ರಮ ನಿರೂಪಿಸಿದರು. ಕನ್ನಡ ವಿಭಾಗದ ಮುಖ್ಯಸ್ಥೆ ಡಾ. ಬೋಜಮ್ಮ ಕೆ.ಎನ್. ವಂದಿಸಿದರು.

**ಇಂದಿನ ಗೋಷ್ಠಿಗಳು**

ಡಾ. ವಿಠಲ್ ರಾವ್ ಟಿ. ಗಾಯಕ್ವಾಡ್ ಅಧ್ಯಕ್ಷತೆಯಲ್ಲಿ, ಧೊಂಡೋ ನರಸಿಂಹ ಮುಳಬಾಗಿಲ ಕುರಿತು ಡಾ. ಎಂ. ಸುಷ್ಮಾ ಬೆಂಗಳೂರು, ಎ. ಆನಂದರಾಯ ಕುರಿತು ಡಾ. ಅನಿತಾ ಬೆಂಗಳೂರು, ಎಂ. ಗೋವಿಂದ ಪೈ ಅವರ ಕುರಿತು ಡಾ. ವಿಶ್ವನಾಥ ಬದಿಕಾನ ಪ್ರಥಮ ಗೋಷ್ಠಿಯಲ್ಲಿ ಮಾತನಾಡಲಿದ್ದಾರೆ. ಡಾ. ಗಣರಾಜ ಕೆ. ಕಾರ್ಯಕ್ರಮ ನಿರ್ವಹಿಸಲಿದ್ದಾರೆ. ದ್ವಿತೀಯ ಗೋಷ್ಠಿ ಡಾ. ಪಾದೇಕಲ್ ವಿಷ್ಣು ಭಟ್ ಅಧ್ಯಕ್ಷತೆಯಲ್ಲಿ ನಡೆಯಲಿದ್ದು, ಚುರುಮುರಿ ಶೇಷಗಿರಿರಾಯ ಕುರಿತು ಡಾ. ಜನಾರ್ದನ ಭಟ್ ಕಾರ್ಕಳ ಗಂಗಾಧರ ಮಡಿವಾಳೇಶ್ವರ ತುರಮುರಿ ಕುರಿತು ಡಾ. ಶಶಿಕಲಾ ಎಚ್. ಬೆಂಗಳೂರು ಪಂಜೆ ಮಂಗೇಶರಾಯರ ಕುರಿತು ಧನಂಜಯ ಕುಂಬ್ಳೆ ಮಾತನಾಡಲಿದ್ದಾರೆ. ದಿನದ ಮೂರನೇ ಗೋಷ್ಠಿಯಲ್ಲಿ ಇಂಗ್ಲಿಷ್ ಭಾಷಾಂತರಕಾರ ಕುರಿತು ಡಾ. ವಿ.ಜಿ. ತಾರಕೇಶ್ವರ ಹೈದರಾಬಾದ್, ಸಂಸ್ಕೃತ ಭಾಷಾಂತರ ಕುರಿತು ಡಾ. ರಾಧಾಕೃಷ್ಣ ಕಾಸರಗೋಡು ಮಾತನಾಡಲಿದ್ದು, ಡಾ. ಎಸ್.ಡಿ. ಶೆಟ್ಟಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.